**OS No.101/2019 PW.1**

ದಿನಾಂಕಃ-07-04-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ- ಶ್ರೀ.ಜಿ ಡಿ ಪಿ ವಕೀಲರಿಂದ ಪ್ರತಿವಾದಿ-1,3,4,5,7 ಮತ್ತು 8 ಪರವಾಗಿ**

ಕುಟುಂಬದ ಸ್ವತ್ತುಗಳಲ್ಲಿ ಪಾಲು ಬೇಕು ಅಂತಾ ದಾವಾ ಮಾಡಿದ್ದೇನೆ. ದಾವಾ ಸ್ವತ್ತನ್ನು ಯಾರು ಕಬ್ಜೆಯನ್ನು ಕೃಷಿ ಮಾಡುತ್ತಾರೆ ಎಂದರೆ ಸಾಕ್ಷಿಯು ನಾವೆಲ್ಲರು ಕೂಡಿಯೇ ಸಾಗುವಳಿ ಮಾಡುತ್ತೇವೆ ಎಂದು ಹೇಳುತ್ತಾರೆ. ಪ್ರತಿವಾದಿ-1, 3, 4, 8 ಪ್ರತ್ಯೇಕ್ಷ ಕಬ್ಜಾ ಹೊಂದಿ ವಹಿವಾಟು ಮಾಡಿಕೊಂಡು ಬಂದಿದ್ದಾರೆ. ನಮ್ಮ ತಂದೆ ಮೃತರಾದ ನಂತರ ನನ್ನ ಅಣ್ಣಂದಿರ

ಹೆಸರಿನಲ್ಲಿ ಡ ಎಂಟ್ರಿ ಆಗಿತ್ತು ಎಂದರೆ ಸಾಕ್ಷಿಯು ನಮ್ಮ ತಾಯಿಯ ಹೆಸರಿನಲ್ಲಿ ಆಗಿದೆ ಎಂದು ಹೇಳುತ್ತಾರೆ. ಆ ರೀತಿ ಡೈರಿ ಎಂಟ್ರಿ ಆಗಿ 30-35 ವರ್ಷ ಆಗಿತ್ತು ಎಂದರೆ ಸಾಕ್ಷಿಯು 1988 ರಂದು ಆಗಿದೆ ಎಂದು ಹೇಳುತ್ತಾರೆ. ಸಂಗನಬಸಪ್ಪ ನಮ್ಮ ತಂದೆ ಆಗಬೇಕು. ಅವರು 1986 ರಲ್ಲಿ ಮೃತರಾಗಿದ್ದರು. ಸಂಗನಬಸಪ್ಪನ ಹೆಂಡತಿ ನಮ್ಮ ತಾಯಿಯ ಹೆಸರು ರುಕ್ಮವ್ವಾ ಈಗ 4 ವರ್ಷಗಳ ಹಿಂದೆ ಮೃತರಾಗಿದ್ದಾರೆ. ನಾವು ಒಟ್ಟು 7 ಜನ ಮಕ್ಕಳು ಇದ್ದು, 5 ಜನ ಹೆಣ್ಣುಮಕ್ಕಳು ಇಬ್ಬರು ಗಂಡು ಮಕ್ಕಳು. ಗಂಡು ಮಕ್ಕಳ ಹೆಸರು ಬಾಹುರಾಜ ಮತ್ತು ಮಾನಿಂಗ. ಹೆಣ್ಣುಮಕ್ಕಳು ಭೌರವ್ವಾ, ಮೀನಾಕ್ಷಿ, ಸಾವಿತ್ರಿ, ಲಕ್ಷ್ಮೀ ಮತ್ತು ನಾನು.

2. ನನ್ನ ಮದುವೆ 1992 ರಲ್ಲಿ ವಿವಾಹ ಆಗಿದೆ. ಭೌರವ್ವಾಳ ಲಗ್ನವಾಗಿ 55 ವರ್ಷ ಆಗಿದೆ. ಮೀನಾಕ್ಷಿ ಲಗ್ನವಾಗಿ 28 ವರ್ಷಗಳಾಯಿತು. ಲಕ್ಷ್ಮೀ ಮದುವೆ 35 ವರ್ಷಗಳಾಯಿತು. ಲಗ್ನ ಆಗುವ ಕಾಲಕ್ಕೆ ಬಂಗಾರ ಮತ್ತು ದುಡ್ಡು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನಗೆ 25 ಗ್ರಾಂ ಮತ್ತು 50 ಸಾವಿರ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಂಗನಬಸಪ್ಪ ಮೃತರಾದ ನಂತರ ಬಾಹುರಾಜ ಮತ್ತು ಮಾನಿಂಗ ವಾಟ್ನಿ ಮಾಡಿಕೊಂಡಿದ್ದು ಆಗ ನಾವೆಲ್ಲ ಸಹೋದರಿಯರು ದಾವಾ ಸ್ವತ್ತುಗಳಲ್ಲಿದ್ದ ಹಕ್ಕನ್ನು ಬಿಟ್ಟುಕೊಟ್ಟು ಅದರ ಆಧಾರ ಮೇಲೆ ಡೈರಿ ಎಂಟ್ರಿ ಆದವು ಎಂದರೆ ಸರಿಯಲ್ಲ. ಅದೇ ಆಧಾರದ ಮೇಲೆ ಮಾನಿಂಗ ಮತ್ತು ಬಾಹುರಾಜ ಕಬ್ಜಾ ವಹಿವಾಟ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**3.** ನಮ್ಮ ತಾಯಿಯ ಹೆಸರಿನಲ್ಲಿ ಕಂದಾಯ ದಾಖಲೆಗಳು ಇದ್ದು ಅದನ್ನು ಪ್ರಶ್ನಿಸಿಲ್ಲ. ಸಾಕ್ಷಿ ನಾನು ಡೈರಿ ಎಂಟ್ರಿ ನಮ್ಮ ತಾಯಿಯ ಹೆಸರಿಗೆ ಆಗುವಾಗ ನಾನು ಸಹಿ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ನಾನು ಸಹಿಯನ್ನು ಹಾಕಿ ಕೊಟ್ಟಿದ್ದರು ಒಪ್ಪಿಗೆ ಕೊಟ್ಟಿದ್ದರು ಇಲ್ಲ ಎಂದು ಸುಳ್ಳು ಹೇಳ್ತುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಅಂತಾ ಸುಳ್ಳು ಹೇಳ್ತುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ 7 ದಾಖಲೆಗಳನ್ನು ಹಾಜರಪಡಿಸಿದ್ದು ಅದರ ಪ್ರಕಾರ ನನಗೆ ಯಾವುದೇ ಹಕ್ಕು ದಾವಾ ಸ್ವತ್ತುಗಳಲ್ಲಿ ನನಗೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ-1, 3, 4, 5, 7, 8 ನೀರಾವರಿ ಜಮೀನ ಇಲ್ಲದ್ದನ್ನು ನೀರಾವರಿ ಮಾಡಿದ್ದಾರೆ

ಎಂದರೆ ಸರಿಯಲ್ಲ. ಬಾಹುರಾಜ ಮತ್ತು ಮಾನಿಂಗ ಜೀವಂತ ಇದ್ದಾಗ ಕೇಳದೆ ಈಗ ದಾವಾ ಸ್ವತ್ತಿನ ಬೆಲೆ ಜಾಸ್ತಿ ಆದ ನಂತರ ಉದ್ದೇಶಪೂರ್ವಕವಾಗಿ ಪಾಲು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಆವಾಗಿನಿಂದಲೂ ಕೇಳುತ್ತಿದ್ದೆ ಕೊಟ್ಟಿಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ